# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. :-- ಫ್ರಾ.ಸಾ. :32**

| | | |
|---|---|---|
| ಸಾಕ್ಷಿಯ ಹೆಸರು | : | ಇಮಾಮ್ ಸಾಬ್ ಜೈನುದ್ದೀನ್ ಘನಿ |
| ತಂದೆಯ ಹೆಸರು | : | ಜೈನುದ್ದೀನ್ ಘನಿ |
| ವಯಸ್ಸು | : | 51 ವರ್ಷ |
| ಕೆಲಸ | : | ಸಿವಿಲ್ ಗುತ್ತಿಗೆದಾರರು, ಹೊನ್ನಾವರ ತಾಲೂಕು |
| ವಾಸ | : | ಚಂದಾವರ, ಹೊನ್ನಾವರ |

**ದಿನಾಂಕಃ 12-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸರಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ 311 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕರಿಸಲ್ಪಟ್ಟ ಮೇರೆಗೆ ಸಾಕ್ಷಿಯ ವಿಚಾರಣೆ.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ.04-05-2021 ರಂದು ಹೊನ್ನಾವರ ಪೊಲೀಸರು ನನಗೆ ಜನತಾ ಕಾಲೋನಿಯಲ್ಲಿರುವ ಚಾಸಾ-14/ ಹೀನಾ ಕೌಸರ್ ರವರು ಮನೆಯ ಬಳಿ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ನನ್ನೊಂದಿಗೆ ಜಹೀರ್ ಅಬ್ಬಾಸ್ ರವರೂ ಸಹ ಪಂಚರಾಗಿ ಹಾಜರಿದ್ದರು. ಅಲ್ಲಿ ಚಾಸಾ-15 ರವರು ಹಾಜರಿದ್ದು, ತಾನು ಚಾಸಾ-14 ರವರ ಮನೆಯ ಅಂಗಳದಲ್ಲಿರುವ ಕಲ್ಲಿನ ಮೇಲೆ ಬಟ್ಟೆ ತೊಳೆಯುತ್ತಿದ್ದಾಗ, ಆರೋಪಿಯು ತನ್ನ ಲುಂಗಿಯನ್ನು ಎತ್ತಿ ತೋರಿಸುತ್ತಾ, ಅಶ್ಲೀಲವಾಗಿ ಮಾತನಾಡಿದಾಗ, ತಾನು ಬಟ್ಟೆ ತೊಳೆಯುತ್ತಿದ್ದ ಜಾಗ ಎಂದು ತೋರಿಸಿದ ಮೇರೆಗೆ, ಅಲ್ಲಿ ಪೊಲೀಸರು ನಮ್ಮಗಳ ಸಮಕ್ಷಮ ನಿಪಿ-24 ರಂತೆ ಪಂಚನಾಮೆಯನ್ನು ಮಾಡಿ, ನಿಪಿ-25 ಮತ್ತು 26 ರಂತೆ ಫೋಟೋ ತೆಗೆದಿರುತ್ತಾರೆ. ನಿಪಿ-24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-24(ಸಿ) ಎಂದು ಗುರುತಿಸಲಾಯಿತು. ಪೊಲೀಸರು ತಾನು ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-114 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-114(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–</u>**

2. ನನ್ನ ಮಾತೃ ಭಾಷೆ ಉರ್ದು ಆಗಿದೆ. ಚಂದಾವರದ ನಮ್ಮ ಸಮುದಾಯಕ್ಕೆ ನಾನು ಮುಖ್ಯಸ್ಥನಾಗಿದ್ದೇನೆ ಎಂದರೆ ಸಾಕ್ಷಿಯು, ನಾನು ಮಾಜಿ ಪಂಚಾಯತ್ ಸದಸ್ಯನಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಸಮುದಾಯದಲ್ಲಿ ಯಾವುದೇ ಘಟನೆಗಳು ನಡೆದಲ್ಲಿ, ಪೊಲೀಸರು ನನ್ನನ್ನು ಸಂಪರ್ಕಿಸುತ್ತಾರೆ ಎಂದರೆ ಸರಿ. ನಮ್ಮ ಜನಾಂಗದವರು ನನ್ನಿಂದ ಸಲಹೆ, ಸೂಚನೆಯುಗಳನ್ನು ಪಡೆಯುತ್ತಾರೆ, ಆದರೆ ನನ್ನ ಎಲ್ಲಾ ಮಾತುಗಳನ್ನು ಕೇಳುವುದಿಲ್ಲ. ಪಂಚನಾಮೆಯನ್ನು ಇದೇ ರೀತಿ ಬರೆಯಬೇಕೆಂದು ಪೊಲೀಸರಿಗೆ ನಾನು ಮಾಹಿತಿ ನೀಡಿಲ್ಲ. ನಿಪಿ–25 ಮತ್ತು 26 ಫೋಟೊದಲ್ಲಿ ತೆಂಗು, ಅಡಿಕೆ ಮತ್ತು ಇತರ ಗಿಡಗಳು ಕಾಣುತ್ತಿವೆ ಎಂದರೆ ಸರಿ. ಪೊಲೀಸರು ನನಗೆ ಪಂಚನಾಮೆಗೆ ಕರೆದಿಲ್ಲ ಹಾಗೂ ನಾನು ಚಾಸಾ–14 ರವರ ಮನೆಯ ಬಳಿ ಪಂಚನಾಮೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ, ಚಾಸಾ–15 ರವರು ಯಾವುದೇ ಸ್ಥಳವನ್ನು ತೋರಿಸಿಲ್ಲ ಹಾಗೂ ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಠಾಣೆಯಲ್ಲಿ ಕರೆಸಿ, ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ